**ದಿನಾಂಕಃ 09.09.2024 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಜೆ. ವಕೀಲರಿಂದಃ–**

ನಿಪಿ–3 ಕ್ರಯಪತ್ರದಲ್ಲಿ ಚೆಕ್ಕುಬಂದಿಯನ್ನು ಯಾವ ದಾಖಲಾತಿಗಳ ಆಧಾರದ ಮೇಲೆ ಬರೆದಿರುತ್ತೀರಿ ಎಂದರೆ ಸಾಕ್ಷಿಯು ಗ್ರಾಮ ಪಂಚಾಯಿತಿಯವರು ನೀಡಿದ ಖಾತಾ ಎಕ್ಸ್ ಟ್ರಾಕ್ಟ್ ಆಧರಿಸಿ ಬರೆದಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಖಾತಾ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿವೇಶನವನ್ನು ರಂಗನಾಥ್ ತಂದೆ ಗೋವಿಂದಪ್ಪ ಅವರ ಕಡೆಯಿಂದ ಖರೀದಿಸಿರುತ್ತೇನೆ. ಗೋವಿಂದಪ್ಪನವರ ತಂದೆ ನಾರಾಯಣಶೆಟ್ಟಿ ಆಗಿರುತ್ತಾರೆ. ನಾರಾಯಣಶೆಟ್ಟಿಯವರ ತಂದೆಯ ಹೆಸರು ನನಗೆ ಗೊತ್ತಿಲ್ಲ.

ನಿಪಿ–2 ಹಕ್ಕುಪತ್ರದ ಮೇಲೆ ನಾನು ನಿವೇಶನವನ್ನು ತೆಗೆದುಕೊಂಡಿರುತ್ತೇನೆ. ನಿಪಿ–2 ರಲ್ಲಿ ನಿವೇಶನದ ಚೆಕ್ಕುಬಂದಿ ನಮೂದು ಮಾಡಿರುವುದಿಲ್ಲ. ನಿಪಿ–2 ನ್ನು ಹೊರತುಪಡಿಸಿ ನಿಪಿ–3 ರಲ್ಲಿ ಬರೆದ ಚೆಕ್ಕುಬಂದಿಯ ನಡುವೆ ಇರುವ ಆಸ್ತಿಯೇ ನಾರಾಯಣಶೆಟ್ಟಿಯವರಿಗೆ ಮಂಜೂರಾಗಿತ್ತು ಎಂದು ತೋರಿಸಲು ನನ್ನ ಬಳಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಿಪಿ–3 ರಲ್ಲಿ ಖಾತೆ ಸಂಖ್ಯೆಃ341 ಸ್ವತ್ತಿನ ಸಂಖ್ಯೆಃ34 ಬರೆದಿರುತ್ತದೆ ಎಂದರೆ ಸರಿ. ನಿಪಿ–6 ಖಾತೆ ವರ್ಗಾವಣೆ ಪಾವತಿಸಿದ ರಸೀದಿಯಲ್ಲಿ ನಿಪಿ–3 ರಲ್ಲಿ ಬರೆದ ಖಾತೆ ಸಂಖ್ಯೆ ನಮೂದು ಮಾಡಿರುವುದಿಲ್ಲ.

ನಿಪಿ–4 ರಲ್ಲಿ ಖಾತೆ ಸಂಖ್ಯೆಃ58 ಎಂದು ನಮೂದಾಗಿರುತ್ತದೆ. ನಿಪಿ–5 ರಲ್ಲಿ ಖಾತೆ ಸಂಖ್ಯೆಃ348/354 ಎಂದು ಬರೆದಿರುತ್ತದೆ ಎಂದರೆ ಸರಿ. ನಿಪಿ–7 ರಲ್ಲಿ ಖಾತೆ ಸಂಖ್ಯೆಃ331/334 ಎಂದು ಬರೆದಿರುತ್ತದೆ ಎಂದರೆ ಸರಿ. ನಿಪಿ–8 ರಲ್ಲಿ ಖಾತೆ ಸಂಖ್ಯೆಃ334/34 ಎಂದು ಬರೆದಿರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿದ ಕಂದಾಯ ರಸೀದಿಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ ಎಂದರೆ ಸರಿ.

ನಿಪಿ–1 ರಲ್ಲಿ ಚೆಕ್ಕುಬಂದಿ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ–3 ಕ್ರಯಪತ್ರದಲ್ಲಿರುವ ಚೆಕ್ಕುಬಂದಿಯನ್ನು ಯಾರು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಪಂಚಾಯಿತಿಯವರು ರಂಗನಾಥ್ ಹೆಸರಿನಲ್ಲಿ ನೀಡಿದ ದಾಖಲೆಯ ಪ್ರಕಾರ ಬರೆಸಿರುತ್ತೇವೆ ಎಂದು ಹೇಳುತ್ತಾರೆ. ಪಂಚಾಯಿತಿಯವರು ಯಾವ ದಾಖಲೆಯನ್ನು ಆಧರಿಸಿ ಚೆಕ್ಕುಬಂದಿ ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿಯವರು ನನಗೆ ನೀಡಿದ ದಾಖಲೆ ಪಂಚಾಯಿತಿಯಲ್ಲಿ ಇರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ–1 ರಿಂದ 7 ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

ದಾವಾ ಸ್ತಿಯ ಪೂರ್ವಕ್ಕೆ ರಾ.ಹೆದ್ದಾರಿ ಸಂಖ್ಯೆ:4 ಹಾದು ಹೋಗುತ್ತದೆ. ದಾವಾ ಪತ್ರದಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ರಾ.ಹೆದ್ದಾರಿ ತೋರಿಸಿರುವುದಿಲ್ಲ. ಕ್ರಯಪತ್ರದಲ್ಲಿ ಇದ್ದಂತೆ ಬರೆಸಿರುತ್ತೇನೆ. ರಾ.ಹೆದ್ದಾರಿ ಮಧ್ಯಸ್ಥರದಿಂದ ಎಡಕ್ಕೆ ಮತ್ತು ಬಲಕ್ಕೆ ಎಷ್ಟು ಅಗಲ ಜಾಗವನ್ನು ಮೀಸಲು ಇಡಬೇಕು ಎಂದರೆ ನನಗೆ ಗೊತ್ತಿಲ್ಲ. ರಾ.ಹೆದ್ದಾರಿ ಮಧ್ಯಸ್ಥರದಿಂದ 70 ಮೀಟರ್ ಅಳತೆಯವರೆಗೆ ಜಾಗ ಬಿಡಬೇಕು ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿರುವ ರಾ.ಹೆದ್ದಾರಿ ಮೊದಲಿಗೆ ರಾಜ್ಯ ಹೆದ್ದಾರಿಯಾಗಿತ್ತು ಎಂದರೆ ಸರಿ. ರಾಜ್ಯ ಹೆದ್ದಾರಿಯ ಮಧ್ಯಸ್ಥರದಿಂದ 30–35 ಅಡಿ ಜಾಗ ಬಿಡಬೇಕಿತ್ತು. ನಿಪಿ–3 ರಲ್ಲಿ ಆಸ್ತಿಯ ಪೂರ್ವಕ್ಕೆ ರಾಜ್ಯ ಹೆದ್ದಾರಿ ಎಂದು ತೋರಿಸಿರುತ್ತದೆ ಎಂದರೆ ಸರಿ.

ಈಗ ರಾ.ಹೆದ್ದಾರಿ ಪ್ರಾಧಿಕಾರದವರು ರಸ್ತೆ ಅಗಲೀಕರಣ ಮಾಡಿ ರಸ್ತೆಯ ಮಧ್ಯಸ್ಥರದಿಂದ 70 ಮೀಟರ್ ಬಿಡಬೇಕು ಎಂದು ರಸ್ತೆ ಅಗಲೀಕರಣ ಮಾಡಿರುತ್ತಾರೆ ಎಂದರೆ ಸರಿ. ಯರಬಳ್ಳಿ ಗ್ರಾಮದಲ್ಲಿರುವ ರಾಜ್ಯ ಹೆದ್ದಾರಿ ರಾ.ಹೆದ್ದಾರಿ ಆದ ಬಳಿಕ ಸದರಿ ರಸ್ತೆಯ ಅಗಲೀಕರಣಕ್ಕೆ ರಸ್ತೆಯ ಪಕ್ಕದಲ್ಲಿರುವ ಸಾರ್ವಜನಿಕರ ನಿವೇಶನ ಮತ್ತು ಮನೆಗಳನ್ನು ರಾ.ಹೆದ್ದಾರಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿರುತ್ತದೆ ಎಂದರೆ ಸರಿ. ಸದರಿ ಸ್ವಾಧೀನಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಬಂದಿರುತ್ತದೆ ಎಂದರೆ ಸರಿ. ನನಗೂ ಸಹ ಪರಿಹಾರ ಬಂದಿದ್ದು ಪರಿಹಾರ ಮೊತ್ತ ರೂ.10 ಲಕ್ಷ ಚಿಲ್ಲರೆ

ಇರುತ್ತದೆ. ಸಂಪೂರ್ಣ ದಾವಾ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಕ್ಕೆ ಸದರಿ ಮೊತ್ತ ಬಂದಿರುತ್ತದೆ ಎಂದರೆ ಸಾಕ್ಷಿಯು ಸಂಪೂರ್ಣ ಆಸ್ತಿ ಸ್ವಾಧೀನಪಡಿಸಿಕೊಂಡಿಲ್ಲ, ಗುರುತಿಸಿದ ಆಸ್ತಿಯನ್ನು ಮಾತ್ರ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ರಾ.ಹೆದ್ದಾರಿ ಪ್ರಾಧಿಕಾರದವರು ನನಗೆ ಸ್ವಾಧೀನತೆಯ ಬಗ್ಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ಅದರಲ್ಲಿ ನನ್ನ ಮಾಲೀಕತ್ವದ ಎಷ್ಟು ಜಾಗವನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದೇವೆ ಎಂದು ನಮೂದಿಸಿದು ಅದು ಪೂರ್ವ–ಪಶ್ಚಿಮ 32 ಅಡಿ, ಉತ್ತರ–ದಕ್ಷಿಣ 90 ಅಡಿ ಜಾಗ ಮಾತ್ರ ಇರುತ್ತದೆ. ಸದರಿ ನೋಟೀಸ್ ಈಗಲೂ ಸಹ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಂಪೂರ್ಣ ದಾವಾ ಆಸ್ತಿಯನ್ನು ರಾ.ಹೆದ್ದಾರಿ ಪ್ರಾಧಿಕಾರದವರು ಸ್ವಾಧೀನಪಡಿಸಿಕೊಂಡಿದ್ದು ನಾನು ಹೇಳುವಂತೆ ಅಲ್ಲಿ ನನ್ನ ಮಾಲೀಕತ್ವದ ಆಸ್ತಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿದ್ದು ಅದರಲ್ಲಿರುವ ಕಟ್ಟಡ ಯಾವುದು ಎಂದು ಕೇಳಿದರೆ ಸಾಕ್ಷಿಯು ಅದು ಪಶು ಆಸ್ಪತ್ರೆ ಎಂದು ಹೇಳುತ್ತಾರೆ. ಸದರಿ ಭಾವಚಿತ್ರವನ್ನು **ನಿಡಿ–1** ಎಂದು ಗುರುತಿಸಲಾಯಿತು. ಸದರಿ ಆಸ್ಪತ್ರೆಯ ದಕ್ಷಿಣ ದಿಕ್ಕಿನಲ್ಲಿ ಅಂಚೆ ಕಛೇರಿಗೆ ಸೇರಿದ ಖಾಲಿ ನಿವೇಶನ ಇರುತ್ತದೆ. ನಿಡಿ–1 ರಲ್ಲಿ ಕಾಣುತ್ತಿರುವ ಪಶು ಆಸ್ಪತ್ರೆ ರಾ.ಹೆದ್ದಾರಿ ಸಂಖ್ಯೆ:4 ಆಗುವ ಮೊದಲೇ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಹಳೇ ಜಾಗ ರಸ್ತೆಗೆ ಹೋಗಿದ್ದು ಗುರುತುಪಡಿಸಿದ ಜಾಗವನ್ನು ಬಿಟ್ಟು ಹಿಂದೆ ಹೊಸ ಕಟ್ಟಡ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ.

ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ಮನೆ 5 ನೇ ಪ್ರತಿವಾದಿಯ ಮನೆ ಎಂದು ಹೇಳುತ್ತಾರೆ. ಸದರಿ ಭಾವಚಿತ್ರವನ್ನು **ನಿಡಿ–2** ಎಂದು ಗುರುತಿಸಲಾಯಿತು. ಅದೇ ಸಾಲಿನಲ್ಲಿ ಉಳಿದ ಪ್ರತಿವಾದಿಯರ ಮನೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಗೆ ಒಂದು ಭಾವಚಿತ್ರ

ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ಮನೆ 1 ನೇ ಪ್ರತಿವಾದಿಯ ಮನೆ ಎಂದು ಹೇಳುತ್ತಾರೆ. ಸದರಿ ಭಾವಚಿತ್ರವನ್ನು **ನಿಡಿ–3** ಎಂದು ಗುರುತಿಸಲಾಯಿತು. 1 ರಿಂದ 6 ನೇ ಪ್ರತಿವಾದಿಯರು ಪಂಚಾಯಿತಿಯಿಂದ ಪರವಾನಿಗೆ ಪಡೆದು ಅವರವರ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಮನೆ ಕಟ್ಟಿರುತ್ತಾರೆ ಆದರೆ ಅದು ನಮ್ಮ ಜಾಗದಲ್ಲಿ ಇರುತ್ತದೆ ಎಂದು ಹೇಳುತ್ತಾರೆ. 1 ರಿಂದ 6 ನೇ ಪ್ರತಿವಾದಿಯರ ಜಾಗದ ದಾಖಲೆಗಳನ್ನು ಮತ್ತು ಮನೆ ಕಟ್ಟಲು ನೀಡಿದ ಪರವಾನಿಗೆ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

1 ರಿಂದ 6 ನೇ ಪ್ರತಿವಾದಿಯರ ಮನೆಗಳ ಪೂರ್ವಕ್ಕೆ ಸರ್ವೀಸ್ ರಸ್ತೆ ಬರುತ್ತದೆ ಎಂದರೆ ಸಾಕ್ಷಿಯು ಸರ್ವೀಸ್ ರಸ್ತೆಗೂ ಮೊದಲು ನನಗೆ ಸೇರಿದ ಜಾಗ ಬರುತ್ತದೆ ಎಂದು ಹೇಳುತ್ತಾರೆ. ನಾನು ಹೇಳುವಂತೆ ಸರ್ವೀಸ್ ರಸ್ತೆಯ ಪಕ್ಕದಲ್ಲಿ ನನಗೆ ಸೇರಿದ ಯಾವುದೇ ಖಾಲಿ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೀಸ್ ರಸ್ತೆಯ ಪಕ್ಕದಲ್ಲಿ ನನಗೆ ಸೇರಿದ ಜಾಗ ಬರುತ್ತದೆ ಎಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಂದ ಅಳತೆ ಮಾಡಿಸಿರುವುದಿಲ್ಲ. ನಿಪಿ–3 ರ ಕ್ರಯಪತ್ರದ ಆಧಾರದ ಮೇಲೆಯೇ ನಾನು ಪ್ರತಿವಾದಿಯರು ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ. ಪ್ರತಿವಾದಿಯರ ಮನೆಯ ಪೂರ್ವಕ್ಕೆ ನನಗೆ ಸೇರಿದ ಖಾಲಿ ಜಾಗ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಸಂಪೂರ್ಣವಾಗಿ ರಾ.ಹೆದ್ದಾರಿ ಪ್ರಾಧಿಕಾರದಿಂದ ಸ್ವಾಧೀನಕ್ಕೆ ತೆಗೆದುಕೊಂಡ ಕಾರಣ ದಾವಾ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–3 ನ್ನು ರಂಗನಾಥ್‌ರವರ ಜೊತೆಗೆ ಸೇರಿಕೊಂಡು ಸುಳ್ಳಾಗಿ ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–3 ಕ್ರಯಪತ್ರ ಬರೆದುಕೊಡಲು ರಂಗನಾಥಶೆಟ್ಟಿಯವರಿಗೆ ಮಾಲೀಕತ್ವದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ರಂಗನಾಥಶೆಟ್ಟಿಯವರ ಹೆಸರಿಗೆ ದಾವಾ ಆಸ್ತಿಯ ಖಾತೆ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ

ದಾಖಲಾತಿ ಹಾಜರುಪಡಿಸಿರುವುದಿಲ್ಲ. ನಿಪಿ–3 ರಲ್ಲಿ ಬರೆದಿರುವ ಖಾತೆ ಸಂಖ್ಯೆ ಮತ್ತು ದಾವಾ ಆಸ್ತಿಯಲ್ಲಸಿ ಬರೆದಿರುವ ಖಾತೆ ಸಂಖ್ಯೆ ಒಂದೇ ನಿವೇಶನಕ್ಕೆ ಸಂಬಂಧಿಸಿದ್ದು ಎಂದು ತೋರಿಸಲು ನಿಪಿ–3 ನ್ನು ಹೊರತುಪಡಿಸಿ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

**ಮುಂದುವರಿದ ಪಾಟೀ–ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.